ಧ್ಯಾನದಿಂದ ಪಟ್ಟನೆ ಎಚ್ಚೆತ್ತುಕೊಳ್ಳುವ ಅವನನ್ನು ನೋಡಿದಾಗ ಸಂಬಂಧ ನನಗೆ ಬೇಕೋ? ಬೇಡವೋ? ಅನ್ನುವುದರ ಮೇಲೆ ಇಂಥ ಗಳಿಗೆಗಳು ಹೊರಡಲು ಕಾಯುತ್ತ ನಿಂತಂತೆ ಕಾಣಿಸುತ್ತವೆ. ಇದು ನನ್ನೊಬ್ಬಳ ಹರಕೆಯೇನು? ಬಿಟ್ಟುಬಿಡಬೇಕು. ಅವನೂ ನೋಯಲಿ... ಅನ್ನಿಸಿದರೂ ನನ್ನ ನೋವಿಗೆ ಮದ್ದು ಅರೆಯುವವರಾರು? ಸುಮ್ಮನೆ ಬಿಡುವುದೇ ಲೇಸೇನೋ ಅನ್ನಿಸುತ್ತದೆ ಹೇಮೂ'' ಬಿಡದೆ ಆಡಿದ ಮಾತು ಮುಗಿದಿತ್ತು.

ಧೋ... ಎಂದು, ಕಣ್ಣೀರು ಸುರಿಸಿದ ಬಾನು ನಿಚ್ಚಳವಾಗಿ ಚಂದ್ರನ ಮೊಗವನ್ನು ಸೆರಗಿನಿಂದ ಆಚೆ ಹಾಕಿತ್ತು. ಗಾಜು ಕಿಟಕಿಯಿಂದ ಕಂಡ ಚಂದ್ರನ ನೋಟವನ್ನು ಬೆರಳು ಮಾಡಿ ತೋರಿದಳು ಸಂಭ್ರಮ. ಅವಳ ಹೆಸರಿನಂತೆ ನಗೆಬುಗ್ಗೆ ಯಾವಾಗಲೂ ಅವಳ ಮೊಗದ ಮೇಲೆ ಸಂಭ್ರಮಿಸುತಿತ್ತು. ಅದು ಈಗ, ನೋವಿನ ಎಳೆಯಲ್ಲಿ ಹೆಣೆದುಕೊಂಡು ಹಿಂಡುವಂತೆ ತೋರುತಿತ್ತು.

ಇಂದು, ಅವಳು ತನ್ನ ಸಂತಸದ ಹಾಗೂ ಗೊಂದಲದ ನೆನಪಿನ ಗಳಿಗೆಯ ಮಳೆಯಲ್ಲಿ ನೆಂದ ಹಕ್ಕಿಯಂತೆ ಮುದುಡಿ ನನ್ನನ್ನು ತಬ್ಬಿ ಮಲಗಿದ್ದಳು. ಒಂಟಿ ಹೆಣ್ಣಿನ ದುಃಖ ನನ್ನನ್ನು ಹಿಡಿದು ಅಲ್ಲಾಡಿಸಹತ್ತಿತ್ತು. ಅವರಿಬ್ಬರ ಸಂತಸದ ಗಳಿಗೆಯನ್ನು ಮೂಕಳಾಗಿ ನೋಡುತಿದ್ದ ಕಣ್ಣೀಗ ಮಳೆಹನಿಯ ಬೆರಗಿನ ಹಿಂದೆ ಎಷ್ಟೊಂದು ಬೆವರಹನಿಗಳ ದುಃಖವಿದೆ ಎಂದು ಅಚ್ಚರಿಯಿಂದ ನೋಡುವಂತಾಗಿತ್ತು. ಇದುವರೆಗೂ ನಾನು ಅವರ ಜಗಳಗಳಿಗೂ, ಮುದ್ದಿಗೂ ಸಾಕ್ಷಿಯಾಗಿದ್ದೆ. ಯೋಚಿಸುತ್ತ, ತಡರಾತ್ರಿಯ ಜಾಡ ದಾರಿಯಲ್ಲಿ ಕಣ್ಣುರೆಪ್ಪೆ ಸೋತು ಒರಗಿದ್ದವು.

ಎದ್ದು ಕಣ್ಣುಬಿಟ್ಟಾಗ, ''ಹೊರಟೆ. ಇನ್ನೊಮ್ಮೆ ನೀನು ಒಬ್ಬಳೇ ಇದ್ದಾಗ ಮೊದ್ಲೆ ತಿಳಿಸು ಹೇಮು. ಬಂದ್ಬಿಡತೀನಿ. ಇವತ್ತಿನ ಥರ ಗಡಿಬಿಡಿ ಮಾಡಬೇಡ. ಆಫೀಸಲ್ಲಿ ಮೀಟೀಂಗ್ ಇದೆ. ಅಲ್ಲೇ ತಿಂಡಿ ತಿಂತೀನಿ. ಅದಕ್ಕೆ ಕೊರಗಬೇಡ. ಅಡಿಗೆ ಮನೇಲಿ ಕೆಟಲ್ ನೋಡು'' ನಗುತ್ತಾ ಗೇಟು ತೆಗೆದು ಸರಸರನೆ ಕಾರು ಏರಿ ಹೋದ ಅವಳನ್ನ ಕಂಡವಳಿಗೆ, ''ಇವಳು ಹೇಗೆ ನಗತಾಳೆ... ಇಷ್ಟು ನೋವಲ್ಲಿ'' ಅನಿಸಿತು. ಇಂಥ ಹೆಣ್ಣಿನ ಸಂಗ ಮಾಡುವಾಗ ಅವನಿಗೆ ಅರಿವು ಬೇಡವಾ? ಅವನ ಸಂಸಾರದ ಜವಾಬ್ದಾರಿ ಇವಳಿಗೆ ಗೊತ್ತಿಲ್ಲದ್ದೇನು?

ಆದಷ್ಟೂ ಅವನಿಗೆ ಇವಳು ಒತ್ತಾಸೆಯಾಗೇ ನಿಂತವಳು. ಅವಳ ವಯಸ್ಸು, ತಾಳ್ಮೆ ಕಡಿಮೆಯೇನು? ಹತ್ತು ವರ್ಷ ಒಬ್ಬರನ್ನು ಹಚ್ಚಿಕೊಳ್ಳುವುದು ಹುಚ್ಚಾಟವಾ? ಅಥವಾ... ಬೇಕೂಫ! ಅವನ ಸಮಯದಲ್ಲಿ ಆರ್ಥಿಕ ಭದ್ರತೆಯೂ ನೆರವಾಗಿರಲಿ, ಈ ನಗು ಮೊಗೆಯ ಚೆಲುವು ಒಲವು ಜೊತೆಗಿರಲಿ ಅಂದುಕೊಂಡನೇನೋ... ಆ ಅನುಮಾನದಲ್ಲಿ, ಯಾಕೋ ಸಂಭ್ರಮ ಕಣ್ಣೆದುರಲ್ಲೇ ಕರಗಿ ಹೋದಂತೆ ಭಯವಾಯಿತು. ನಿಜವಾಗಲಾರದು. ಆಗಬಾರದು. ಅವನು ಪಲಾಯನವಾದಿ ಅಲ್ಲದಿರಲಿ. ಗೆಳತಿಯ ಸಂಭ್ರಮ ಹಾಗೇ ಉಳಿಯಲಿ. ಇಲ್ಲ! ಅವನು ಗಂಭೀರ ಮನುಷ್ಯ. ಅವನೆಂದೂ ಲಂಪಟನಾಗದಿರಲಿ. ಅವನ ಕಡು ಎಚ್ಚರದಲ್ಲೂ ಹಿಂದಿನಂತೆ ಅವಳಿಗಾಗಿ ಅವನ ಕ್ಷಣಗಳು ಮೀಸಲಿರಲಿ. ಅದು ಅವನಿಗೆ ತಿಳಿದಿರಲಿ. ದೇವಾ! ಅವಳು ಅವನನ್ನು ಬೇರೆಯಾಗಿ ನೋಡಿ ನೋಯುವ ಕಾಲ ಬಾರದಿರಲಿ. ಇಬ್ಬರಲ್ಲೂ ನಗೆಬಳ್ಳಿ ಹಬ್ಬಲಿ.

ಏನಾದರಾಗಲಿ, ಇಬ್ಬರಲ್ಲಿ ಯಾರೇ ಮೊದಲು ಈ ಮಾಯಕದ ಒಲವಿಗೆ ಅಡಿಯಿಟ್ಟಿದ್ದರೂ ಜೊತೆಗೆ ನಡೆದು ಸಂಭ್ರಮಿಸಿದ್ದು ಇಬ್ಬರೂ ಅನ್ನುವುದು ನಿಜವೇ ತಾನೇ? ಆ ಗಳಿಗೆಗಳಿಗೆ ಬೆನ್ನು ಹಾಕಿ ಇವಳೊಬ್ಬಳನ್ನೇ ಬಿಟ್ಟು ಹರೀಶ ಹೋದನೆಂದರೆ ಅವನ ತಿಳಿವಳಿಕೆಗೆ ಗೆದ್ದಲು